



# ‘ಅಧ್ಯಾತ್ಮ ಪ್ರಬೋಧ’

ಉತ್ತರ ಕನ್ನಡ ಜಿಲ್ಲೆಯ ಶಿರಳಗಿಯಲ್ಲಿರುವ ಶ್ರೀ ಚೈತನ್ಯ ರಾಜಾರಾಮ ಕ್ಷೇತ್ರದ ಶ್ರೀ ಬ್ರಹ್ಮಾನಂದ ಭಾರತೀ ಸ್ವಾಮೀಜಿಯವರು ವಿವಿಧ ಸಂದರ್ಭಗಳಲ್ಲಿ ನೀಡಿದ ಪ್ರವಚನಗಳನ್ನು ಆಧರಿಸಿ ರಚಿಸಲಾದ ಗ್ರಂಥವೇ ‘ಅಧ್ಯಾತ್ಮ ಪ್ರಬೋಧ.’ ಇದನ್ನು ಶ್ರೀ ಬಾಲಕೃಷ್ಣ ಡಿ. ಕಾರಂತ ಅವರು ಲೇಖನರೂಪಕ್ಕಿಳಿಸಿ, ಸಂಪಾದನೆ ಮಾಡಿದ್ದಾರೆ. ಶ್ರೀ ಚೈತನ್ಯ ರಾಜಾರಾಮ ಕ್ಷೇತ್ರ ಚಾರಿಟಬಲ್ ಟ್ರಸ್ಟ್ ಇದನ್ನು ಪ್ರಕಟಿಸಿದೆ. ಅದ್ವೈತ ಪರಂಪರೆಗೆ ಸೇರಿದ ಪೂಜ್ಯ ಸ್ವಾಮೀಜಿಯವರ ಈ ಪ್ರವಚನಗಳು ಪ್ರಧಾನವಾಗಿ ವೇದ, ವೇದಾಂತ, ಯೋಗ, ಸಾಧನೆ ಮುಂತಾದ ವಿಷಯಗಳನ್ನೊಳಗೊಂಡಿವೆ; ಸಹಜವಾಗಿ ಅದ್ವೈತಪರವಾದ ವಿಷಯ ಪ್ರತಿಪಾದನೆ ಹಾಗೂ ವಿವರಣೆ ಇಲ್ಲಿದೆ.




**ಕೃತಿ:** ಅಧ್ಯಾತ್ಮ ಪ್ರಬೋಧ
**ನಿರೂಪಕರು :** ಬಾಲಕೃಷ್ಣ ಡಿ. ಕಾರಂತ
**ಪ್ರಕಾಶನ :** ಶ್ರೀ ಚೈತನ್ಯ ರಾಜಾರಾಮ ಕ್ಷೇತ್ರ ಚಾರಿಟಬಲ್ ಟ್ರಸ್ಟ್
**ಮೊ.:** 9845380992
**ಬೆಲೆ:** 150/- **ಪುಟ:** 154

ಈ ಗ್ರಂಥದಲ್ಲಿ ಹನ್ನೆರಡು ಲೇಖನಗಳಿವೆ. ಇವುಗಳ ಶೀರ್ಷಿಕೆಗಳೇ ವಿಷಯವನ್ನು ತಿಳಿಸಿಕೊಡುವುದರಿಂದ ಅವನ್ನು ಇಲ್ಲಿ ಉಲ್ಲೇಖಿಸಲಾಗಿದೆ: ೧) ಅವಸ್ಥಾತ್ರಯ ವಿವೇಕ, ೨) ದೇಹತ್ರಯ ವಿವೇಕ (ಪಂಚಕೋಶ ವಿವೇಕ), ೩) ದೃಕ್-ದೃಶ್ಯ ವಿವೇಕ, ೪) ಆತ್ಮಾ-ಅನಾತ್ಮಾ ವಿವೇಕ, ೫) ಅಧ್ಯಾಸ ಮತ್ತು ಅಧ್ಯಾರೋಪ, ೬) ಅಂತಃಕರಣ ಚತುಷ್ಟಯ ಹಾಗೂ ಬಂಧನ ಮುಕ್ತಿ, ೭) ಮನೋಲಯ ಹಾಗೂ ಮನೋನಾಶ, ೮) ಯೋಗ ಮತ್ತು ಅಧ್ಯಾತ್ಮ, ೯) ಧ್ಯಾನದ ವಿಧಾನ, ಸಿದ್ಧತೆ ಹಾಗೂ ಸ್ವರೂಪ, ೧೦) ವೇದಾಂತದ ಮಹಾವಾಕ್ಯಗಳು, ೧೧) ಪ್ರಸ್ಥಾನತ್ರಯಗಳ ಪರಿಚಯ, ೧೨) ಯುವಕರಿಗೆ ಭಗವದ್ಗೀತೆ. ಈ ಪ್ರವಚನಗಳೆಲ್ಲ ಬಹುತೇಕ ಪರಿಚಯಾತ್ಮಕವಾಗಿದ್ದು, ಸರಳ ಭಾಷೆಯಲ್ಲಿ ಅದ್ವೈತ ವೇದಾಂತವನ್ನು ನಿರೂಪಿಸುತ್ತವೆ. ಹೊಸದಾಗಿ ವೇದಾಂತವನ್ನು ಅರಿತುಕೊಳ್ಳಬಯಸುವವರಿಗೆ ಇದೊಂದು ಉತ್ತಮ ಪ್ರವೇಶ ಗ್ರಂಥ ಎನ್ನಬಹುದು.


ವೇದಾಂತ ತತ್ತ್ವದ ಪ್ರಧಾನ ಅಂಗಗಳಾದ ಅವಸ್ಥಾತ್ರಯ, ಪಂಚಕೋಶ, ಶರೀರತ್ರಯ, ಅಧ್ಯಾಸ, ಅಂತಃಕರಣ, ಮಹಾವಾಕ್ಯ, ಪ್ರಸ್ಥಾನತ್ರಯಗಳು – ಇವನ್ನೆಲ್ಲ ವಿವಿಧ ಲೇಖನಗಳಲ್ಲಿ ಹಲವು ದೃಷ್ಟಾಂತ, ಉದಾಹರಣೆ ಹಾಗೂ ನಿದರ್ಶನಗಳೊಂದಿಗೆ ಇಲ್ಲಿ ವಿವರಿಸಲಾಗಿದೆ. ನಿರೂಪಣಾ ಶೈಲಿ ಸರಳವಾಗಿದ್ದರೂ, ಅತ್ಯಂತ ರೋಚಕವಾಗಿವೆ. ಒಂದು ಉದಾಹರಣೆ:

“ರೂಪ-ಸ್ವರೂಪ ಎಂಬ ಪದಗಳನ್ನು ತಿಳಿದರೆ ಆತ್ಮಸ್ವರೂಪವೆಂದರೆ ಏನೆಂದು ಅರ್ಥವಾಗುತ್ತದೆ. ಮಡಿಕೆ, ಕುಡಿಕೆ, ಹೂಜಿ ಇವೆಲ್ಲ ಬೇರೆ ಬೇರೆ ಆಕಾರಗಳಲ್ಲಿ ಮಾಡಿರುವ ಮಣ್ಣಿನ ರೂಪಗಳು. ಇವೆಲ್ಲದರ ಸ್ವರೂಪ ಮಣ್ಣು. ಹಾಗೆಯೇ ಕಂಠಾಭರಣ, ಕೈಗೆ, ಕಾಲಿಗೆ ಹಾಕುವ ಆಭರಣಗಳೆಲ್ಲ ವಿವಿಧ ಆಕಾರಗಳು, ರೂಪಗಳು. ಹೆಸರು ಬೇರೆ ಬೇರೆ ಆದರೆ ಎಲ್ಲದರ ಸ್ವರೂಪ ಚಿನ್ನ. ಅದೇ ರೀತಿ ಸಮುದ್ರದಲ್ಲಿ ಅಲೆ, ತೆರೆ, ನೊರೆ ಮುಂತಾದ ಹೆಸರಿನಲ್ಲಿ ಬೇರೆ ಬೇರೆ ಆಕಾರಗಳು ಕಾಣಿಸುತ್ತವೆ. ಆದರೆ ಎಲ್ಲದರ ಸ್ವರೂಪ ನೀರು. ಸ್ವರೂಪ ಎಂದರೆ ಮೂಲ ಕಾರಣ; ಅದರಿಂದ ಮಾಡಿರುವುದೆಲ್ಲ, ಆಗಿರುವುದೆಲ್ಲ ಕಾರ್ಯ. ‘ಆತ್ಮಾ’ ಎಂದರೆ, ನಮ್ಮ ಅಥವಾ ಈ ಜಗತ್ತಿನ ಸ್ವರೂಪ. ನಾಮ-ರೂಪಗಳಲ್ಲಿ ವಿಧ ವಿಧವಾಗಿ ತೋರುತ್ತಿರುವ ಈ ಜಗತ್ತಿನ ತಿರುಳು (essence) ಅಥವಾ ಸಾರಭೂತವಾದ ವಸ್ತುವೇ ಆತ್ಮಾ.” *(೪. ಆತ್ಮಾ-ಅನಾತ್ಮಾ ವಿವೇಕ, ಪು. ೬೧ )*

ಇಷ್ಟು ಸರಳವಾಗಿ ಗಹನ ತತ್ತ್ವವನ್ನು ವಿವರಿಸುವುದು ಅತ್ಯಂತ ಕಷ್ಟ. ಆದರೆ ಈ ರೀತಿ ಹೇಳುವ ಕಲೆ ಲೇಖಕರಿಗೆ ಸಿದ್ಧಿಸಿದೆ. ಇದರಿಂದ ಹೆಚ್ಚು ಲಾಭ ಸಾಮಾನ್ಯ ಓದುಗನಿಗೆ. ತತ್ತ್ವವಿಚಾರಗಳು ಎಲ್ಲೂ ಬೇಸರ ತರಿಸದಂತೆ ಅಲ್ಲಲ್ಲಿ ಶ್ರೀಶಂಕರ, ವಿದ್ಯಾರಣ್ಯ, ರಮಣ ಮಹರ್ಷಿ, ವಿವೇಕಾನಂದ, ಡಿ.ವಿ.ಜಿ. ಮುಂತಾದವರ ನಿದರ್ಶನಗಳನ್ನು ನೀಡಿರುವುದು ಬಹಳ ಕುತೂಹಲಕಾರಿ ಸಂಗತಿ. ವೇದಾಂತದ ಪ್ರಧಾನ ಪರಿಭಾಷೆಗಳನ್ನು ಸೂಕ್ತ ದೃಷ್ಟಾಂತಗಳೊಂದಿಗೆ ವಿವರಿಸಿರುವುದು ತುಂಬ ಉಪಯುಕ್ತವಾಗಿದೆ. ಈ ಲೇಖನಗಳನ್ನು ಓದುವಾಗ, ಪೂಜ್ಯ ಸ್ವಾಮೀಜಿಯವರು ಉತ್ತಮವಾದ ಒಂದು ವೇದಾಂತ ಪರಿಚಯದ ಗ್ರಂಥವನ್ನು ಸಮಗ್ರವಾಗಿ ಬರೆದಿದ್ದರೆ ಹೆಚ್ಚು ಜನರಿಗೆ ಅದರಿಂದ ಉಪಯೋಗವಾಗುತ್ತಿತ್ತು ಅನ್ನಿಸುತ್ತದೆ. ಅಂಥ ಒಂದು ಕೃತಿ ಆದಷ್ಟು ಬೇಗನೆ ಹೊರಬರಲಿ ಎಂದು ನಿರೀಕ್ಷಿಸೋಣ. ಒಟ್ಟಿನಲ್ಲಿ, ವೇದಾಂತದ ಉದಾತ್ತ ವಿಚಾರಗಳನ್ನು ಸರಳವಾಗಿ ತಿಳಿಯಬಯಸುವವರಿಗೆ ಇದು ಒಂದು ಉತ್ತಮ ಕೃತಿಯಾಗಿದೆ. ❋


ಪುಸ್ತಕ ಪರಿಚಯ

# ಮೈಸೂರು ರಾಮಕೃಷ್ಣ ಆಶ್ರಮದ ಹೊಸ ಪ್ರಕಟಣೆಗಳು





## 'ಜೀವರೊಡನೆ ದೇವರೆಡೆಗೆ' – ಸ್ವಾಮಿ ನಿರಾಮಯಾನಂದ

ಈ ಕೃತಿಯು ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಅಖಂಡಾನಂದರೊಡನೆ ಅವರ ಆಪ್ತ ಶಿಷ್ಯರಾಗಿದ್ದ ಸ್ವಾಮಿ ನಿರಾಮಯಾನಂದರು ನಡೆಸಿದ ಮಾತುಕತೆಗಳ ಸಂಗ್ರಹವಾಗಿದೆ. ಮೂಲ ಬಂಗಾಳಿಯಲ್ಲಿ ರಚಿಸಿದ ಈ ಕೃತಿಯನ್ನು ಕುಮಾರಿ ಪಿ. ಉಷಾ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಮೊದಲು 'ವಿವೇಕಪ್ರಭ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದ್ದ ಈ ಕೃತಿಯು ಈಗ ಗ್ರಂಥರೂಪದಲ್ಲಿ ಹೊರಬರುತ್ತಿದೆ. ೧೭ ಭಾಗಗಳಲ್ಲಿರುವ ಈ ಕೃತಿಯಲ್ಲಿ, ಧೀಮಂತ ಸಂನ್ಯಾಸಿಯೊಬ್ಬರು ತಮ್ಮ ಗುರು ಶ್ರೀರಾಮಕೃಷ್ಣರ ಬಗ್ಗೆ, ತಮ್ಮ ಆತ್ಮೀಯ ಸೋದರ ಸಂನ್ಯಾಸಿಗಳಾದ ಸ್ವಾಮಿ ವಿವೇಕಾನಂದರೇ ಮುಂತಾದವರ ಬಗ್ಗೆ, ಆಧ್ಯಾತ್ಮಿಕ ಸಾಧನೆ, ಭಗವದ್ದರ್ಶನ, ತಮ್ಮ ಪರಿವ್ರಜನದ ದಿನಗಳು, ಸಂನ್ಯಾಸಿ ಜೀವನ, ತತ್ತ್ವ ಹಾಗೂ ಜೀವನ ಮೌಲ್ಯಗಳು ಮುಂತಾದ ವಿಷಯಗಳ ಬಗ್ಗೆ ಹೇಳಿರುವ ಅನೇಕ ಸಂಗತಿಗಳು ದಾಖಲಾಗಿವೆ. ಆಧ್ಯಾತ್ಮಿಕ ಸಾಧಕರಿಗೆ ಸ್ಫೂರ್ತಿ ಹಾಗೂ ಪ್ರೇರಣೆ ನೀಡಬಲ್ಲ ಹಲವು ಘಟನೆಗಳೂ ಇಲ್ಲಿವೆ. **ಪುಟಗಳು : 168** **ಬೆಲೆ: 90/-**




## 'ದಿವ್ಯಾತ್ಮರೊಡನೆ' – ಸ್ವಾಮಿ ಅಪೂರ್ವಾನಂದ

ಶ್ರೀರಾಮಕೃಷ್ಣರ ನೇರ ಶಿಷ್ಯರಲ್ಲಿ ಪ್ರಮುಖರಾದ ಸ್ವಾಮಿ ಶಿವಾನಂದ ಅಥವಾ ಮಹಾಪುರುಷ ಮಹಾರಾಜರೊಡನೆ ಅತ್ಯಂತ ನಿಕಟವಾಗಿ ಒಡನಾಡಿದ್ದ ಸ್ವಾಮಿ ಅಪೂರ್ವಾನಂದರು, ಅವರೊಂದಿಗೆ ತಾವು ಕಳೆದ ದಿವ್ಯ ಕ್ಷಣಗಳನ್ನು ಬರೆದಿಟ್ಟುಕೊಂಡಿದ್ದು, ಮುಂದೆ ಬಂಗಾಳಿಯಲ್ಲಿ 'ದೇವಲೋಕೇ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದರು. ಅದರ ಇಂಗ್ಲಿಷ್ ಅನುವಾದವು 'In the Divine Realm' ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಈ ಗ್ರಂಥದ ಕನ್ನಡಾನುವಾದವು ಈಗ 'ದಿವ್ಯಾತ್ಮರೊಡನೆ' ಎಂಬ ಶೀರ್ಷಿಕೆಯೊಂದಿಗೆ ಪ್ರಕಟವಾಗಿದೆ. ಇದನ್ನು ಕನ್ನಡಕ್ಕೆ ಅನುವಾದಿಸಿದವರು ಮಾತಾ ತ್ಯಾಗಮಯೀ ಅವರು. ಮೂಲ ಲೇಖಕರ ಮುನ್ನುಡಿ 'ಅರಿಕೆ'ಯೊಂದಿಗೆ, ೨೧ ಅಧ್ಯಾಯಗಳಲ್ಲಿ ಹತ್ತು ಹಲವು ವಿಷಯಗಳನ್ನು ಇಲ್ಲಿ ನಿರೂಪಿಸಲಾಗಿದೆ. ಮುಖ್ಯವಾಗಿ, ತಮ್ಮ ದೀಕ್ಷಾಗುರು ಶ್ರೀಮಾತೆಯವರ ನೆನಪು, ಶ್ರೀ ರಾಮಕೃಷ್ಣರ ನೇರ ಶಿಷ್ಯಂದಿರ ಒಡನಾಟ, ಮಹಾಪುರುಷ ಮಹಾರಾಜರ ನೆನಪುಗಳು ಇಲ್ಲಿ ವಿವಿಧ ಘಟನೆಗಳೊಂದಿಗೆ ವಿವರಿಸಲ್ಪಟ್ಟಿವೆ. ರಾಮಕೃಷ್ಣ ಮಹಾಸಂಘದ ಅತಿಶ್ರೇಷ್ಠ ಸಂನ್ಯಾಸಿಗಳೊಬ್ಬರಿಗೆ ಸಂಬಂಧಿಸಿದ ಅತ್ಯಪೂರ್ವ ಸಂಗತಿಗಳ ದಾಖಲೆ ಇಲ್ಲಿದೆ. ಆಧ್ಯಾತ್ಮಿಕ ಸಾಧಕರೆಲ್ಲ ಓದಲೇಬೇಕಾದ ಕೃತಿ ಇದು. **ಪುಟಗಳು : 324** **ಬೆಲೆ: 150/-**




## 'ಅಧ್ಯಾತ್ಮ ರಾಮಾಯಣ' – ಸ್ವಾಮಿ ರಾಘವೇಶಾನಂದ

ವಾಲ್ಮೀಕಿ ರಾಮಾಯಣವನ್ನು ಅವಲಂಬಿಸಿ ಹಾಗೂ ಅನುಸರಿಸಿ ಬರೆದಿರುವ ಹಲವು ಬಗೆಯ ರಾಮಾಯಣಗಳಲ್ಲಿ ಅತ್ಯಂತ ವಿಶಿಷ್ಟವಾದುದೇ ಅಧ್ಯಾತ್ಮ ರಾಮಾಯಣ. ಇದನ್ನೂ ವಾಲ್ಮೀಕಿ ಋಷಿಗಳೇ ಬರೆದರು ಎನ್ನಲಾಗಿದೆ. ಭಕ್ತಿ, ಜ್ಞಾನಗಳ ಸುಂದರ ಸಮನ್ವಯವನ್ನು ಇಲ್ಲಿ ಕಾಣಬಹುದಾಗಿದೆ. ಶ್ರೀರಾಮಕೃಷ್ಣರಿಗೆ ಅತ್ಯಂತ ಪ್ರಿಯವಾಗಿದ್ದ ಈ ಕೃತಿಯನ್ನು ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳಾದ ಪೂಜ್ಯ ಸ್ವಾಮಿ ರಾಘವೇಶಾನಂದರು ಸರಳ, ಸುಂದರವಾಗಿ ಕನ್ನಡದಲ್ಲಿ ನಿರೂಪಿಸಿದ್ದಾರೆ. ರಾಮಾಯಣದ ಆರು ಕಾಂಡಗಳನ್ನು ಆಯಾ ಸರ್ಗಗಳೊಂದಿಗೆ ನಿರೂಪಿಸಲಾಗಿದೆ; ಸಾಕ್ಷಾತ್ ಶಿವನೇ ಪಾರ್ವತಿಗೆ ರಾಮನ ಕಥೆಯನ್ನು ಹೇಳಿರುವುದಾಗಿ ಅಧ್ಯಾತ್ಮ ರಾಮಾಯಣದಲ್ಲಿ ಹೇಳಿರುವುದರಿಂದ ಪ್ರತಿ ಸರ್ಗದ ಕೊನೆಯಲ್ಲಿ ಅದನ್ನು 'ಉಮಾಮಹೇಶ್ವರ ಸಂವಾದೇ' ಎಂದು ನೆನಪಿಸಲಾಗಿದೆ. ನಡುನಡುವೆ ಸುಂದರವದ ರೇಖಾಚಿತ್ರಗಳು ಪುಸ್ತಕದ ಅಂದವನ್ನು ಹೆಚ್ಚಿಸಿದೆ. ಸಂಗ್ರಹಯೋಗ್ಯ ಕೃತಿ ಇದಾಗಿದೆ. **ಪುಟಗಳು : 304** **ಬೆಲೆ: 150/-**

**ಪ್ರಕಾಶಕರು:** ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು, 570 020. ಪ್ರತಿಗಳಿಗಾಗಿ ಸಮೀಪದ ಆಶ್ರಮದ ಶಾಖೆಯನ್ನು ಸಂಪರ್ಕಿಸಿ.
ಇಮೇಲ್: myspublication@gmail.com Ph: 9482880009